# ಡಾ. ಸಿದ್ಧಲಿಂಗಯ್ಯನವರ ನಾಟಕಗಳಲ್ಲಿ ಪರ್ಯಾಯ ಸಾಂಸ್ಕೃತಿಕ ಚಿಂತನೆ

**ಅನಸೂಯ ಕ. ಕಾಂಬಳೆ***

**DOI: https://doi.org/10.5281/zenodo.21793132**

**ABSTRACT**

ದಲಿತ ಕವಿ ಡಾ. ಸಿದ್ಧಲಿಂಗಯ್ಯನವರ 'ಏಕಲವ್ಯ', 'ಪಂಚಮ' ಹಾಗೂ 'ನೆಲಸಮ' ನಾಟಕಗಳು ಶೋಷಿತ ಸಮುದಾಯಗಳ ಪರ್ಯಾಯ ಸಾಂಸ್ಕೃತಿಕ ಹಾಗೂ ತಾತ್ವಿಕ ನಿರೂಪಣೆಯಾಗಿ ಮೂಡಿಬಂದಿವೆ. ಪುರಾಣದ ಕಥೆಯನ್ನು ಮರುಸೃಷ್ಟಿಸಿ ಶೂದ್ರ ಪ್ರಜ್ಞೆಯನ್ನು ಜಾಗೃತಗೊಳಿಸುವ 'ಏಕಲವ್ಯ', ಸ್ವಾತಂತ್ರ್ಯೋತ್ತರ ಭಾರತದಲ್ಲಿ ವಿದ್ಯಾವಂತ ದಲಿತರು ಎದುರಿಸುತ್ತಿರುವ ನೌಕರಶಾಹಿಯ ಜಾತಿ ತಾರತಮ್ಯವನ್ನು ವಿಡಂಬಿಸುವ 'ಪಂಚಮ' ಮತ್ತು ನಗರೀಕರಣದ ಸೌಂದರ್ಯೀಕರಣದ ಹೆಸರಿನಲ್ಲಿ ನಿರ್ಗತಿಕರನ್ನು ಒಕ್ಕಲೆಬ್ಬಿಸುವ ಪ್ರಭುತ್ವದ ಕ್ರೌರ್ಯವನ್ನು ಪ್ರಶ್ನಿಸುವ 'ನೆಲಸಮ' ನಾಟಕಗಳು ಶೋಷಣೆಯ ಮೂಲವನ್ನು ಶೋಧಿಸುತ್ತವೆ. ಧಾರ್ಮಿಕ ಮೌಢ್ಯ, ಹುಸಿ ಮೌಲ್ಯಗಳು ಹಾಗೂ ಸಾಮಾಜಿಕ ಅಸಮಾನತೆಗಳ ವಿರುದ್ಧ ಬಂಡಾಯವೆದ್ದು, ಸಮಸಮಾಜದ ನಿರ್ಮಾಣಕ್ಕಾಗಿ ನಿರಂತರ ಹೋರಾಟವೇ ಅನಿವಾರ್ಯ ಎಂಬ ದಲಿತ ಸ್ವಾಭಿಮಾನದ ಎಚ್ಚರವನ್ನು ಈ ಕೃತಿಗಳು ಹೇಗೆ ಕಟ್ಟಿಕೊಟ್ಟಿವೆ ಎಂಬುದನ್ನು ಇಲ್ಲಿ ವಸ್ತುನಿಷ್ಠವಾಗಿ ವಿಶ್ಲೇಷಿಸಲಾಗಿದೆ.

**KEYWORDS:** ಡಾ. ಸಿದ್ಧಲಿಂಗಯ್ಯ, ಪರ್ಯಾಯ ಸಾಂಸ್ಕೃತಿಕ ಚಿಂತನೆ, ದಲಿತ ಪ್ರಜ್ಞೆ, ಸಾಮಾಜಿಕ ಅಸಮಾನತೆ, ಶೋಷಣೆ ಮತ್ತು ಬಂಡಾಯ.

* **ಡಾ. ಅನಸೂಯ ಕಾಂಬಳೆ,** ಸಹಾಯಕ ಪ್ರಾಧ್ಯಾಪಕರು, ಡಾ. ಆರ್. ಸಿ. ಹಿರೇಮಠ ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

ದಲಿತರ ಆದಿಕವಿ ಎಂದೇ ಖ್ಯಾತರಾದ ಸಿದ್ಧಲಿಂಗಯ್ಯನವರು ಮೂರು ನಾಟಕಗಳನ್ನು ಬರೆದಿದ್ದಾರೆ. ಮೂರೂ ನಾಟಕಗಳ ವಸ್ತು ಭಿನ್ನವಾಗಿವೆ. ಒಂದು ಊಳಿಗಮಾನ್ಯ ವ್ಯವಸ್ಥೆಯಲ್ಲಿಯ ಕಾಡಿನ ಜನರಾದ ಬೇಡರ ಏಕಲವ್ಯನ ಕಥೆ. ಮತ್ತೊಂದು ಸ್ವತಂತ್ರ ಭಾರತದಲ್ಲಿ ದಲಿತ ವಿದ್ಯಾವಂತರಿಗೆ ಅವರ ಅರ್ಹತೆಗೆ ತಕ್ಕ ವಿದ್ಯೆ, ನೌಕರಿ ನೀಡದೆ ವಂಚಿಸುತ್ತಿರುವ ಮೇಲ್ಜಾತಿ ನೌಕರಶಾಹಿಯ ನಡವಳಿಕೆಯನ್ನು ಪ್ರಶ್ನಿಸುವ ಕಥೆ. ಮೂರನೆಯ ನಾಟಕ ನಗರಗಳ ಸೌಂದರ್ಯೀಕರಣಕ್ಕಾಗಿ ಕೊಳಗೇರಿ ನಿವಾಸಿಗಳನ್ನು ನೆಲಸಮ ಮಾಡುತ್ತಿರುವ ಪ್ರಭುತ್ವ ಶತಶತಮಾನಗಳಿಂದಲೂ ದಲಿತರು ಬದುಕಿಗಾಗಿ ಹೋರಾಡುತ್ತಲೇ ಇರಬೇಕಾದ ಎಚ್ಚರ. ಇಂದು ದಲಿತರು ತಮ್ಮ ಬರಹಕ್ಕಾಗಿ ಎಂಥ ವಸ್ತುಗಳನ್ನು ಆಯ್ಕೆ ಮಾಡಿಕೊಳ್ಳಬೇಕು ಎಂಬುದಕ್ಕೆ ಮಾರ್ಗದರ್ಶನ ಮಾಡುತ್ತವೆ. ಎನ್.ಎಸ್. ಶಂಕರ್ ಅವರು "ದಲಿತ-ಬಂಡಾಯದ ಆರಂಭದ ಸಂದರ್ಭದಲ್ಲಿ ನಮ್ಮ ಕಲ್ಚರಲ್ ಸಂರಚನೆ ಹೇಗಿರಬೇಕೆಂದು ಚಿಂತನೆಯಲ್ಲಿ ತೊಡಗಿದ್ದಾಗ ದೇವರ ಸ್ಥಾನದಲ್ಲಿ 'ಮನುಷ್ಯ' ನನ್ನು ಮತ್ತು ಧರ್ಮ/ಮೌಢ್ಯದ ಜಾಗದಲ್ಲಿ 'ವಿಜ್ಞಾನ'ವನ್ನು ಮುಖಾಮುಖಿಯಾಗಿಸಿದೆವು." ನಾಟಕ, ಬೀದಿ ನಾಟಕಗಳು, ಹೋರಾಟದ ಹಾಡುಗಳು ಒಟ್ಟು ಸಾಹಿತ್ಯ ತನ್ನೊಳಗೆ ವೈಚಾರಿಕ ಆಯಾಮವನ್ನು ಪಡೆದದ್ದನ್ನು ವಿವರಿಸಿದ್ದರು. ಈ ಮಾದರಿಯ ಪಠ್ಯಗಳೆಂಬಂತೆ ಡಾ. ಸಿದ್ಧಲಿಂಗಯ್ಯನವರ ನಾಟಕಗಳಿವೆ.

**ಏಕಲವ್ಯ:**

ಮಹಾಭಾರತದ ಉಪಕಥೆಯಾದ 'ಏಕಲವ್ಯ'ನ ಕಥೆ ರಾಮಾಯಣದ 'ಶಂಬೂಕ'ನ ಕಥೆಗಿಂತ ಭಿನ್ನವಾದುದು. ಕನ್ನಡದ ಮೊದಲ ಶೂದ್ರ ಸಾಹಿತಿಯಾದ ಕುವೆಂಪು ಅವರು ಶಂಬೂಕನನ್ನು ಕುರಿತು 'ಶೂದ್ರತಪಸ್ವಿ' ನಾಟಕ ರಚಿಸಿ ಶೂದ್ರ ಪ್ರಜ್ಞೆಯನ್ನು ಜಾಗೃತಗೊಳಿಸಿದರೆ, ದಲಿತ ಕವಿಯಾದ ಸಿದ್ಧಲಿಂಗಯ್ಯನವರು ಮಹಾಭಾರತದ 'ಏಕಲವ್ಯ'ನ ಕುರಿತು ನಾಟಕ ಬರೆದು ಶೂದ್ರ ಮತ್ತು ದಲಿತ ಪ್ರಜ್ಞೆಯನ್ನು ಮರು ಸಂಚಲನಗೊಳ್ಳುವಂತೆ ಯಕ್ಷಗಾನ ಮತ್ತು ದೊಡ್ಡಾಟದ ಮಾದರಿಯಲ್ಲಿ ಕಟ್ಟಿಕೊಟ್ಟಿದ್ದಾರೆ.

ಈ 'ಏಕಲವ್ಯ'ನ ಕಥೆಯು ಕಿಟೆಲ್‌ರನ್ನು ಬಹಳ ಪ್ರಭಾವಿಸಿದಂತಿದೆ. 'ಏಕಲವ್ಯ'ನನ್ನು ತಮ್ಮ ನಾಟಕದ ವಸ್ತುವನ್ನಾಗಿಟ್ಟುಕೊಂಡು 'Purpose' (ಉದ್ದೇಶ), 'Fulfillment' (ಸಾಫಲ್ಯ ) ಮತ್ತು 'Expectation' (ಪಶ್ಚಾತ್ತಾಪ) ಎಂಬ ಮೂರು ನಾಟಕಗಳನ್ನು ಬರೆದಿದ್ದಾರೆ. ಟಿ.ಪಿ. ಕೈಲಾಸಂ ಅವರ 'Purpose', ಕುವೆಂಪು ಅವರ 'ಬೆರಳ್‌ಗೆ ಕೊರಳ್', ಗೋವಿಂದ ಪೈ ಅವರ 'ಹೆಬ್ಬೆರಳು', ಮೇಘಮಿತ್ರರ 'ಎಚ್ಚೆತ್ತ ಏಕಲವ್ಯ', ಸತ್ಯಾನಂದ ಪಾತ್ರೋಟರ 'ಮತ್ತೊಬ್ಬ ಏಕಲವ್ಯ' ಹೀಗೆ ಶೂದ್ರನಾದ ಏಕಲವ್ಯನನ್ನು ಕಥಾನಾಯಕನಾಗಿ ಇಟ್ಟುಕೊಂಡು ಕ್ರಿ.ಶ. 1926 ರಿಂದ ಅಂದರೆ ಟಿ.ಪಿ. ಕೈಲಾಸಂರ 'Purpose' ನಿಂದ ಹಿಡಿದು ಸಿದ್ಧಲಿಂಗಯ್ಯನವರ 'ಏಕಲವ್ಯ' ಕ್ರಿ.ಶ 1984ರ ವರೆಗೆ ಸುಮಾರು ಹದಿನಾರಕ್ಕೂ ಹೆಚ್ಚು ನಾಟಕಗಳು ರಚನೆಗೊಂಡಿವೆ. ಅಲ್ಲದೆ ಕೆಲವು ನಾಟಕಗಳಲ್ಲಿ ಅರೆ ಪಾತ್ರಗಳಲ್ಲಿ ಏಕಲವ್ಯನ ಪಾತ್ರ ಪೋಷಣೆ ಮಾಡಿದ

ನಾಟಕಗಳು ಇವೆ ಎಂದು ಸಂಶೋಧಕರು ಗುರುತಿಸಿದ್ದಾರೆ.

ಸಾಹಿತ್ಯಕ, ಸಾಂಸ್ಕೃತಿಕ ಚಳುವಳಿಗಳು ಉಚ್ಛ್ರಾಯ ಸ್ಥಿತಿಯಲ್ಲಿದ್ದ ಕಾಲದಲ್ಲಿ ಬರೆದ ಸಿದ್ಧಲಿಂಗಯ್ಯನವರ ನಾಟಕ ದಲಿತ ಬದುಕಿಗೆ ಬರೆದ ವ್ಯಾಖ್ಯಾನದಂತಿದೆ. ಶೂದ್ರ/ದಲಿತರ ಎಚ್ಚರದ ಪ್ರಜ್ಞೆ ಹೇಗಿರಬೇಕು, ತನ್ನ ಸಮುದಾಯದ ಕಾಳಜಿಯೊಂದಿಗೆ ಸಮಸ್ತ ಜೀವ ಸಂಕುಲವನ್ನು ಕಾಪಾಡಲು ತಾನು ಕಲಿತ ವಿದ್ಯೆ ಪ್ರಯೋಜನಕ್ಕೆ ಬರಬೇಕು ಎಂಬ ಆಶಯವನ್ನು ಈ ನಾಟಕದ ಧ್ವನಿಯಾಗಿಸಿದ್ದಾರೆ.

'ಏಕಲವ್ಯ' ನಾಟಕ ಪ್ರಾರಂಭವಾಗುವುದೇ ಕುರುಕ್ಷೇತ್ರ ಯುದ್ಧ ಆರಂಭವಾದ ಕೆಲದಿನಗಳ ನಂತರದಲ್ಲಿ. ಯುದ್ಧ ಯಾತಕ್ಕಾಗಿ, ಯಾರಿಗಾಗಿ ಎಂಬ ಪ್ರಶ್ನೆ ಮೂಲದಲ್ಲೇ ಎದುರಾಗುತ್ತದೆ. 'ಬಿಲ್ವಿದ್ಯೆ' ಏಕಲವ್ಯನಂತ ಕಾಡಿನ ಸಮುದಾಯಕ್ಕೆ ಉಪಜೀವನದ ಭಾಗವಾದರೆ, ಪ್ರಭು/ಅರಸರಿಗೆ ಅದು ಅಧಿಕಾರದ ವಿಸ್ತರಣೆಯ ಭಾಗವಾಗಿದೆ ಎಂಬ ಕಣ್ಣೋಟವನ್ನು ನಾಟಕ ಆರಂಭದಲ್ಲಿ ನೀಡುತ್ತದೆ. "ಹಾಸ್ಯದ ಹೊನಲಲ್ಲ ಶೃಂಗಾರ ಮಡುವಲ್ಲ, ಸಂಘರ್ಷದಾ ಕಥೆ ಬಂಧುಗಳೇ, ಅಡವಿಯ ಬಾಲನು ಘನ ಏಕಲವ್ಯನು ಹೋರಾಟ ಮಾಡಿದ ಕಥೆ ಕೇಳಿ" ಎನ್ನುತ್ತಲೇ 'ಕಾಡಿಗೆ ಹೋರಾಡಿ ಕಣ್ಣಾದ ವೀರನ ಕಥೆಯಿದು'. ಎಂದು ತಾನು ಬರೆಯುತ್ತಿರುವ ಕಥೆ ನಾಡು/ಊರಿನದಲ್ಲ ಎಂದು ಸ್ಪಷ್ಟಪಡಿಸುತ್ತಾರೆ. 'ನಾಡು' ಪ್ರಭುವಿನ ಆಳ್ವಿಕೆಗೆ ಒಳಪಟ್ಟಿದುದು. 'ಕಾಡು' ಪ್ರಕೃತಿದತ್ತವಾದದು. ಅದು ಯಾರ ನಿಯಂತ್ರಣಕ್ಕೂ ಹುಸಿ ಮೌಲ್ಯಗಳ ಹೇರಿಕೆಗೆ ಒಳಗಾದುದಲ್ಲ. ಗಿಡ, ಮರ, ಪ್ರಾಣಿ, ಪಕ್ಷಿ, ಮನುಷ್ಯ ಎಲ್ಲರೂ ಇಲ್ಲಿ ಮುಖ್ಯರು. ಆದರೆ ನಾಡಿನ ಸಂಸ್ಕೃತಿ ಜೀವವಿರೋಧಿಯಾದದು. ಅದು ಕಾಡನ್ನು ಕಬಳಿಸಿಕೊಂಡು ಆಳಬೇಕೆನ್ನುತ್ತದೆ. ಅದಕ್ಕಾಗಿ ಅದು ಕಾಡಿನ ಮೇಲೂ, ಕಾಡಿನ ಜನರ ಮೇಲೂ ದೌರ್ಜನ್ಯವೆಸಗುತ್ತಲೇ ಬರುತ್ತಿದೆ. ಅದಕ್ಕಾಗಿ ಕಾಡಿಗೂ ನಾಡಿಗೂ ಸಂಘರ್ಷವಿದೆ.

ಯುದ್ಧ ಮತ್ತು ವಿದ್ಯೆಯ ನಿಷ್ಕರ್ಷೆ ಈ ನಾಟಕದಲ್ಲಿ ನಡೆಯುತ್ತದೆ. ಇದುವರೆಗಿನ ಯುದ್ಧಗಳು ಯಾಕಾಗಿ ನಡೆದವು. ನಾಡಿಗಾಗಿ ಹೋರಾಡಿ ಪ್ರಾಣತೆತ್ತ ವೀರ (ಜನಸಾಮಾನ್ಯ)ನಿಗೆ ದಕ್ಕಿದಾದರೂ ಏನು? ಅವನ ಹೆಂಡತಿಯ ವೈಧವ್ಯ ಎಂಬ ವಾಸ್ತವ ಪ್ರಜ್ಞೆಯನ್ನು ಮೂಡಿಸುತ್ತದೆ. ಆ ಮೂಲಕ ಸ್ವರ್ಗ ಸುಖದ ರೋಮ್ಯಾಂಟಿಕ್ ಕಲ್ಪನೆಯನ್ನು ತಲೆಕೆಳಗೂ ಮಾಡುತ್ತದೆ. "ಕುರುಡು ರಾಜನು ಅಂದು ಕೇಳಿದ ಪ್ರಶ್ನೆಗೆ ಉತ್ತರ ಕೊಡುವೆವು ನಾವಿಂದು" ಎಂದು ಹೆಣ್ಣಿನ ಹುಚ್ಚಿಗಾಗಿ, ಜೂಜಿನ ಮೋಜಿಗಾಗಿ ಹೆಂಡತಿಯನ್ನು ಪಣಕ್ಕಿಟ್ಟು ಸೋತು ಪರಸ್ಪರ ವೈರಿಗಳಾಗಿ ಅಧಿಕಾರದ ಮದದಿಂದ ಅಣ್ಣ ತಮ್ಮನನ್ನು, ಅಪ್ಪ ಮಗನನ್ನು, ಗುರು ಶಿಷ್ಯರನ್ನು ಕೊಲ್ಲುತ್ತಾ 'ಪ್ರಾಣವು ಮಣ್ಣಿನ ಕಣವಾಗಿ ಹೋಯ್ತು' ಎಂದು ಮಾನವರ ಪ್ರಾಣ ಹಾನಿ ಮಾಡುವಂಥದ್ದು ಎಂದು ಕಥನದ ಹಿಂದಿನ ಆಂತರ್ಯವನ್ನು ತೆರೆದಿಡುತ್ತಲೇ ಕಾಡಿನ ಸೌಹಾರ್ದದ ಬದುಕನ್ನು ಅದಕ್ಕೆ ಪರ್ಯಾಯವೆಂಬಂತೆ ಕಾಡಿನ ವೀರ ಏಕಲವ್ಯನ ಕಥೆ ಅನಾವರಣಗೊಳ್ಳುತ್ತದೆ. ಡಾ. ಕೆ. ಮರುಳಸಿದ್ದಪ್ಪ ಅವರು "ಹೀಗೆ ನಾಟಕ ಆರಂಭದಲ್ಲಿಯೇ ಈ ಪುರಾಣ ಕಥೆಯ ಮೂಲಕ ತಾವು ಪ್ರತಿಪಾದಿಸಲಿರುವ

ಸಾಮಾಜಿಕ ಸಂದೇಶವನ್ನು ನಾಟಕಕಾರರು ಸ್ಪಷ್ಟಪಡಿಸಿದ್ದಾರೆ. ನಾಗರಿಕರು ಕಲಿತ ವಿದ್ಯೆ ಹೇಗೆ ಅಪವ್ಯಯವಾಗುತ್ತದೆ, ಅವರ ಶಸ್ತ್ರಾಸ್ತ್ರ ನೈಪುಣ್ಯತೆ ವೈಧವ್ಯಕ್ಕೆ ಹೇಗೆ ಕಾರಣವಾಗುತ್ತದೆ ಎಂಬುದು ನಾಟಕದಲ್ಲಿ ಮತ್ತೆ ಮತ್ತೆ ಪ್ರಸ್ತಾಪಗೊಳ್ಳುತ್ತದೆ. ಕೇವಲ ವೈಯಕ್ತಿಕ ನೆಲೆಯಿಂದ ಹುಟ್ಟಿದ ಅಭಿಮಾನ, ಛಲ ಮತ್ತು ಹೊಟ್ಟೆ ಕಿಚ್ಚಿನಿಂದಾಗಿ ಸಂಭವಿಸಿದ ಮಹಾಭಾರತದ ಯುದ್ಧ ಇದಾವುದಕ್ಕೂ ಸಂಬಂಧವಿಲ್ಲದ ಸಾವಿರಾರು ಸೈನಿಕರನ್ನು ಬಲಿ ತೆಗೆದುಕೊಳ್ಳುವ ಬಗೆಗೆ ನಾಟಕಕಾರರ ತಿರಸ್ಕಾರವಿದೆ. ಆದರೆ ಏಕಲವ್ಯನು ಸಾಧಿಸ ಹೊರಟ ಬಿಲ್ವಿದ್ಯೆ ಲೋಕ ಕಲ್ಯಾಣಕ್ಕಾಗಿ, ತನ್ನ ನಾಡಿನ ರಕ್ಷಣೆಗಾಗಿ ಮೀಸಲಾದ ವಿದ್ಯೆ. ಪಾತ್ರಾ ಪಾತ್ರರನ್ನು ನೋಡಿ ವಿದ್ಯೆಯನ್ನು ಕಲಿಸಬೇಕು ಎನ್ನುವ ನಂಬಿಕೆಯಿರುವ ಹಿಂದೂ ಪರಂಪರೆಯಲ್ಲಿ ಕ್ಷತ್ರಿಯರಿಗೂ ಬೇಡರಿಗೂ ಇರುವ ಈ ವ್ಯತ್ಯಾಸ ವ್ಯಂಗ್ಯ ಪೂರ್ಣವಾಗಿದೆ''[1] ಎಂದಿದ್ದಾರೆ. ವಿದ್ಯೆಯ ಮಹತ್ವವನ್ನು ನಾಟಕ ತಿಳಿಯುವ ನೆಲೆಯೇ ಬೇರೆ. ಪ್ರಭುತ್ವ ತಾನು ಪಡೆಯುವ ವಿದ್ಯೆಯನ್ನು ಸಾಮ್ರಾಜ್ಯದ ವಿಸ್ತರಣೆಗಾಗಿ ಬಳಸುತ್ತದೆ. ಅದಕ್ಕಾಗಿ ಅದು ಹಿಂಸೆಯಿಂದ ಕೂಡಿದೆ. ಅದು ಬಹುಜನರ ಉಪಯೋಗಕ್ಕೆ ಬರುವುದಿಲ್ಲ. ಜನಬದುಕಿಗಾಗಿ, ಉಪಜೀವನದ ಮಾರ್ಗವಾಗಿ ಬಳಸುವ ಏಕಲವ್ಯನ ಕಾಡಿನ ಸಂಸ್ಕೃತಿ ಅಹಿಂಸೆಯಿಂದ ಕೂಡಿದೆ. ಅದು ಜೀವನ್ಮುಖಿಯಾಗಿದೆ. ಆದ್ದರಿಂದ ಅಂತ ವಿದ್ಯೆಯಲ್ಲಿ ಇಂದಿನ ಕಾಲಕ್ಕೆ ತಕ್ಕಂತೆ ಹೊಸ ನೈಪುಣ್ಯತೆ ಬೇಕಾಗಿದೆ. ಅಪ್ಪನ ಕಾಲದ ಬಿಲ್ಲುಗಳನ್ನು ಬದಲಿಸಬೇಕಿದೆ ಎಂಬ ಆಶಯವನ್ನು ಏಕಲವ್ಯನ ಮೂಲಕ ನಿರೂಪಿಸುತ್ತಾರೆ. ಅದು ಲೋಕೋದ್ಧಾರದ ಚಿಂತನೆಗಾಗಿ ಕಾಲಕ್ಕೆ ತಕ್ಕಂತೆ ಆಗಬೇಕಾದ ಮಾರ್ಪಾಡಾಗುತ್ತದೆ. ರಾಜರು ಕಲಿಯುವ ಬಿಲ್ವಿದ್ಯೆಗೂ ಕಾಡಿನವರು ಕಲಿಯುವ ಬಿಲ್ವಿದ್ಯೆಗೂ ವ್ಯತ್ಯಾಸ ಇರುವುದನ್ನು ಏಕಲವ್ಯನ ಮಾವನ ಮೂಲಕ ನಾಟಕಕಾರರು ಹೇಳಿಸುತ್ತಾರೆ. ''ಹೆಮ್ಮೆಯಿಂದ.... ತಂಗಿ ನಾವ್ಯಾರು? ನಮ್ಮ ಬಲವೇನು? ಇದನ್ನು ತಿಳಿಯದೆ ಮಾತನಾಡುತ್ತಿದ್ದಿ. ಬಿಲ್ಲು ವಿದ್ಯೆ ಬೇಡರ ಹುಟ್ಟುಗುಣ. ಅರಸು ಮಕ್ಕಳಿಗೆ ಅದು ಕಲಿಕೆ. ಅರಸು ಮಕ್ಕಳಿಗೆ ಅದು ತೊಟ್ಟ ಬಟ್ಟೆ, ಬೇಡರಿಗೆ ಅದು ಮೈಗಂಟಿದ ಚರ್ಮ. ಅವರನ್ನು ಬೇಡುವುದರಲ್ಲಿ ನ್ಯಾಯಾನೇ ಇಲ್ಲ.'' ಎಂದು ಹೇಳುವ ಮೂಲಕ ಪ್ರಕೃತಿ ನಿರ್ಮಿತ ಚರ್ಮಕ್ಕೆ ಜೀವಂತಿಕೆ ಇದೆ. ಅದನ್ನು ದೇಹದಿಂದ ಬೇರ್ಪಡಿಸಲು ಬರುವುದಿಲ್ಲ. ಆದರೆ ಬಟ್ಟೆ ಮಾನವ ನಿರ್ಮಿತ. ಅದನ್ನು ಬೇರ್ಪಡಿಸಬಹುದು. ಮನುಷ್ಯನಿರ್ಮಿತ ಕೃತಕ ನಿರ್ಮಿತಿಗಳನ್ನು ನಾಶ ಮಾಡಬಹುದು. ಮನುಷ್ಯನ ಬದುಕಿನ ಭಾಗವಾಗಿ ಬಂದದ್ದು ಜ್ಞಾನ. ಅದು ಅನುಭವದಿಂದ ಬಂದುದು. ವಿನಾಶದ ಉದ್ದೇಶಕ್ಕಾಗಿ ಕಲಿಯುವುದು ಯಾಂತ್ರಿಕವಾದುದು. ಎರಡೂ ವರ್ಗಗಳು ಕಲಿಯುವ ವಿದ್ಯೆಯ ವ್ಯತ್ಯಾಸವನ್ನು ಸ್ಪಷ್ಟಪಡಿಸುತ್ತಾರೆ. ''ಅಣ್ಣಾ ನಿನಗೇ ಗೊತ್ತು ಊರಿನವರ ಉಪಟಳ ಏನೂ ಅಂತ. ಪಟ್ಟಣದವರನ್ನು ಅಡಗಿಸಬೇಕಾದರೆ ಅವರ ಪಟ್ಟುಗಳನ್ನೇ ಹಾಕಬೇಕು. ಅವರ ಬಾಣ ದಿಕ್ಕು ತಪ್ಪಬೇಕಾದರೆ ಊರಿನವರ ರೀತಿ ನೀತಿಯಲ್ಲೇ ಅದನ್ನು ಕತ್ತರಿಸಬೇಕು. ಕಾಡಿನ ವಿದ್ಯೆ ಏಕಲವ್ಯನಿಗೆ ಗೊತ್ತೇ ಅದೆ, ಊರಿನೋರ ಇದ್ಯೇನೂ ಇವನಿಗೆ ಗೊತ್ತಾಗಲಿ ಬಿಡಣ್ಣ'' ಎಂದ ತಾಯಿ ಮಾತು ದಂಗುಬಡಿಸುತ್ತದೆ. 'ಊರಿನೋರ ವಿದ್ಯೆ' ಯನ್ನು ಕಲಿಯಬೇಕು ಎನ್ನುವುದು ಸಮಕಾಲಿನ ವಾಸ್ತವತೆಯಂತೆ ಕಾಣುತ್ತದೆ. ಊರಿನವರ ಜೊತೆ ಸೆಣಸಿ ಗೆಲ್ಲಬೇಕಾದರೆ ಅವರಿಗೆ ಮುಖಾಮುಖಿಯಾಗುವ ಸಾಂಸ್ಕೃತಿಕ

ಸಂಘರ್ಷಕ್ಕೆ ರೆಡಿಯಾಗಬೇಕಾದ ಅನಿವಾರ್ಯತೆ ಇರುವುದನ್ನು ಒತ್ತಿ ಹೇಳಿದಂತಿದೆ.

ಪುರೋಹಿತಶಾಹಿ ಮತ್ತು ಪ್ರಭುತ್ವ ಯಾವಾಗಲೂ ತಮ್ಮ ಹಿತಾಸಕ್ತಿಗಾಗಿ ಒಂದಾಗಿ ಪೂರಕವಾಗಿ ಕೆಲಸ ಮಾಡುತ್ತವೆ. ಅದಕ್ಕಾಗಿ ಸಾಮಾಜಿಕ ಅಸಮಾನತೆಯನ್ನು ಜತನವಾಗಿ ಕಾಪಾಡಿಕೊಳ್ಳುತ್ತವೆ. ಪರಸ್ಪರ ಅವಲಂಬಿತರೂ, ಫಲಾನುಭವಿಗಳು ಆಗಿರುವ ಇಬ್ಬರು ಹೇಗೆ ಹೊಂದಿಕೊಂಡಿದ್ದಾರೆ ಎಂಬುದನ್ನು ನಾಟಕದ ನಾಲ್ಕನೆಯ ದೃಶ್ಯದಲ್ಲಿ ದ್ರೋಣಾಚಾರ್ಯರಿಗೆ ಭೀಷ್ಮರು ಹೇಳುವ ಮಾತುಗಳ ಮೂಲಕ ಸ್ಪಷ್ಟಪಡಿಸುತ್ತಾರೆ.

**ಭೀಷ್ಮ:** "...ಕ್ಷತ್ರಿಯರು ರಾಜ್ಯವನ್ನು ಆಳಲು ಅರ್ಹರಾದವರು. ನಮ್ಮ ಪದ್ಧತಿಗಳನ್ನು, ಜೀವನವನ್ನು ಅವರು ರೂಪಿಸುತ್ತಾರೆ ನಿಜ. ಆದರೆ ಕ್ಷತ್ರಿಯ ಬಲವಷ್ಟೇ ನಿರ್ಣಾಯಕವಲ್ಲ. ಕ್ಷತ್ರಿಯರ ಬಾಹುಬಲಕ್ಕೆ ಬ್ರಾಹ್ಮಣರ ಬುದ್ಧಿಯ ಬಲ ಅಗತ್ಯವಾಗಿ ಬೇಕಾಗಿದೆ.

ಆಚಾರ್ಯ, ಜಗತ್ತನ್ನು ಆಳಲು, ನಿಯಂತ್ರಿಸಲು ಸಮರ್ಥರಾಗುವಂತೆ ಕ್ಷತ್ರಿಯರನ್ನು ಸಿದ್ಧಗೊಳಿಸುವುದರಲ್ಲಿ ನಿಮ್ಮ ಸಾರ್ಥಕತೆ ಅಡಗಿದೆ.

ನಿಮ್ಮ ತೊಳಲಾಟವನ್ನು ಅರ್ಥಮಾಡಿಕೊಳ್ಳಬಲ್ಲೆ ಆಚಾರ್ಯ. ಕ್ಷತ್ರಿಯ ಬ್ರಾಹ್ಮಣರ ನಡುವಿನ ಸ್ಥಾನಮಾನಗಳ ವ್ಯತ್ಯಾಸವನ್ನು ನಾನಿಲ್ಲಿ ಹೇಳುತ್ತಿಲ್ಲ ಜಗತ್ತಿನ ಎಲ್ಲ ಜೀವಿಗಳನ್ನು ಕ್ಷತ್ರಿಯರು ನಿಯಂತ್ರಿಸುತ್ತಾರೆ. ಆದರೆ ಬ್ರಾಹ್ಮಣರು ಲೋಕದ ಎಲ್ಲ ಜೀವಿಗಳ ಆತ್ಮಗಳ ಅಧಿಕೃತ ಒಡೆಯರು. ಆತ್ಮ ಲೋಕದ ಸಾಮ್ರಾಟರಾದ ತಮ್ಮ ಮುಂದೆ ನಾವು ಎಷ್ಟರವರು ಆಚಾರ್ಯ!".[2] ಎಂದು ಧಾರ್ಮಿಕ ಸೂಕ್ಷ್ಮತೆಯ ವಿಚಾರಗಳನ್ನು ಹೇಳುವ ಮೂಲಕ ಜನರನ್ನು ಭಯದಲ್ಲಿಟ್ಟು ನಿಯಂತ್ರಿಸಲು ಪುರೋಹಿತಶಾಹಿಯ ಧರ್ಮ ಗ್ರಂಥಗಳ ನಿಯಮಗಳು ಬೇಕು ಎಂಬ ಸೂಕ್ಷ್ಮವನ್ನು ನಾಟಕಕಾರರು ಓದುಗರಿಗೆ/ ನೋಡುಗರಿಗೆ ದಾಟಿಸುತ್ತಾರೆ. ಪುರೋಹಿತಶಾಹಿ ನಿಯಮಗಳನ್ನು (ವಿಧಿ ನಿಷೇಧ)ಗಳನ್ನು ರೂಪಿಸಿದರೆ ಪ್ರಭುತ್ವ ಅದನ್ನು ಆಚರಣೆಗೆ ತರುವ ಮೂಲಕ ಜನರನ್ನು ತನ್ನ ನಿಯಂತ್ರಣದಲ್ಲಿಟ್ಟುಕೊಳ್ಳುತ್ತದೆ. ಭೀಷ್ಮರು ಅದಕ್ಕಾಗಿಯೇ ದ್ರೋಣರಿಗೆ ಸೂಕ್ಷ್ಮ ಸಂಗತಿಗಳತ್ತ ಗಮನ ಹರಿಸೋಣ ಎನ್ನುತ್ತಾರೆ. ಇಂಥ ಒಂದು ತಂತ್ರದ ಭಾಗವಾಗಿ ಬಂದದ್ದೇ "ಶೂದ್ರರಿಗೆ ಗುರು ಮುಖೇನ ವಿದ್ಯೆ ಕಲಿಸಲು ಶಾಸ್ತ್ರ ಅಡ್ಡವಿದೆ" ಎಂದು ಏಕಲವ್ಯನಿಗೆ ದ್ರೋಣರು ಹೇಳಿದ್ದು. 'ಏಕಲವ್ಯ ನಿನ್ನ ಕನಸು ನನಸಾದರೆ ಅದು ಲೋಕದ ದುರಂತಕ್ಕೆ ನಾಂದಿಯಾಗುತ್ತದೆ' ಎನ್ನುತ್ತಾರೆ. ಏಕಲವ್ಯನು ವಿದ್ಯೆ ಕಲಿತರೆ ಲೋಕಕ್ಕೆ ಏಕೆ ದುರಂತವಾಗುತ್ತದೆ ಎಂಬ ತಾತ್ವಿಕ ಪ್ರಶ್ನೆಯನ್ನು ಈ ನಾಟಕ ನಮ್ಮ ಮುಂದಿಡುತ್ತದೆ. ಶೂದ್ರ ಜ್ಞಾನವಂತನಾದರೆ ಆತ ಯಾರ ಗುಲಾಮನೂ ಆಗಲಾರ. ಸಮುದಾಯ ಆಧಾರಿತ ಸೇವೆಗಳು ಮೇಲ್ವರ್ಗ, ಜಾತಿಗಳಿಗೆ ಸಿಗುವುದಿಲ್ಲ. ಕರ್ಮ ಸಿದ್ಧಾಂತ ಆಧಾರಿತ ಕರ್ಮಗಳನ್ನು ಮಾಡುವುದಿಲ್ಲ. ಆಗ ಈ ಎರಡು ಏಜೆನ್ಸಿಗಳು ಕೂತು ಉಣ್ಣನು ಸಾಧ್ಯವಾಗುವುದಿಲ್ಲ. ಅದಕ್ಕಾಗಿ ವರ್ಣ, ಜಾತಿಗಳು ಮನುಷ್ಯರನ್ನು ತಮ್ಮ ಆಚರಣೆಗಳ ಮೂಲಕ ಬಂಧಿಸುತ್ತಾ ಬರುತ್ತವೆ. ಭೀಮಾರ್ಜುನರ ಮಾತುಗಳು ಅದನ್ನೇ ಹೇಳುತ್ತಿವೆ. 'ಪಾಲಿಗ ಬಂದ

ವೃತ್ತಿಯನ್ನು ನಿಷ್ಕಾಮದಿಂದ ನಿರ್ವಹಿಸಲು' ಒತ್ತಾಯಿಸುತ್ತವೆ ಮತ್ತು ಮುಂದಿನ ಜನ್ಮದ ಆಮಿಷವನ್ನು ಒಡ್ಡುತ್ತದೆ. 'ಹಿಂದಿನ ಜನ್ಮದ ಪಾಪ ಕಾರಣ' ಎಂದು ದ್ರೋಣರು ಹೇಳಿದಾಗ ಏಕಲವ್ಯ ಕುದಿಯುತ್ತಾನೆ ಮತ್ತು ಹೀಗೆ ಪ್ರತಿಕ್ರಿಯಿಸುತ್ತಾನೆ. "ಪೂಜ್ಯರೇ, ತಮ್ಮ ಶಿಷ್ಯನಾಗುವ ಭಾಗ್ಯ ನನಗಿಲ್ಲ. ಬೇಡನಾಗಿ ಹುಟ್ಟಿ ಕಲಿಯಲು ಶಾಸ್ತ್ರ ಸಮ್ಮತವಿಲ್ಲ... ಓಹ್, ಇದಕ್ಕೆ ಖಂಡಿತವಾಗಿಯೂ ನೀವಾರು ಹೊಣೆಗಾರರಲ್ಲ. ಕೀಳು ಕುಲದಲ್ಲಿ ಹುಟ್ಟಿದ್ದ ಪಾಪಕ್ಕೆ ನಾನೇ ಕಾರಣ. ನನ್ನ ಜನ್ಮಕ್ಕೆ ಧಿಕ್ಕಾರವಿರಲಿ.

ಈ ಜನ್ಮದಲ್ಲಿ ನನ್ನನ್ನು ಅಪಮಾನಕ್ಕೆ ಈಡು ಮಾಡಿದ ಹಿಂದಣ ಜನ್ಮದ ಪಾಪ ಪರಂಪರೆಗೆ ಧಿಕ್ಕಾರವಿರಲಿ, ಹೆಚ್ಚು ಕಲಿಯಬೇಕೆಂಬ ಆಸೆಯ ಕಿಡಿಯನ್ನು ನನ್ನ ಎದೆಯಲ್ಲಿ ಹೊತ್ತಿಸಿದ ನನ್ನ ಜ್ಞಾನದಾಹಕ್ಕೆ ಧಿಕ್ಕಾರವಿರಲಿ"[3] ಎಂದು ಪ್ರತಿರೋಧ ತೋರುತ್ತಾನೆ. 'ನೀವಾರು ಹೊಣೆಗಾರರಲ್ಲವೆ' ಎನ್ನುವ ಪ್ರಶ್ನೆ ಇಡೀ ವೈದಿಕ ವ್ಯವಸ್ಥೆಗೆ ಬಾಣ ಬಿಟ್ಟಂತೆ ಇದೆ. ಅಂತ ಪಾಪ ಪರಂಪರೆಯೊಂದಿದ್ದರೆ ಅದಕ್ಕೆ ಧಿಕ್ಕಾರ ಹೇಳುವ ಏಕಲವ್ಯನ ಪರಂಪರೆಯ ಪ್ರಜ್ಞೆ ಪರ್ಯಾಯವೊಂದನ್ನು ಹುಟ್ಟು ಹಾಕುತ್ತದೆ. ದಲಿತ ಸಾಹಿತ್ಯ ಇಂತದೊಂದು ಪರಂಪರೆಯ ಪ್ರಜ್ಞೆಯನ್ನು ಇಟ್ಟುಕೊಂಡೇ ಪ್ರತಿಕ್ರಿಯಿಸಿದೆ.

ದಲಿತರಿಗೆ ವಿದ್ಯೆಯನ್ನು ನಿರಾಕರಿಸುವುದು ಮತ್ತು ಸ್ವಯಂ ಶಬ್ದವೇದಿಯಾದ ಏಕಲವ್ಯನ ಹೆಬ್ಬೆರಳನ್ನು ಗುರುದಕ್ಷಿಣೆ ಎಂಬ ಹುಸಿ ಮೌಲ್ಯದ ಹೆಸರಿನಲ್ಲಿ ಕಿತ್ತುಕೊಳ್ಳುವುದು, ಜ್ಞಾನ, ಅಧಿಕಾರ ಮತ್ತು ಬಲ/ ಶಕ್ತಿಯನ್ನು ಕಿತ್ತುಕೊಳ್ಳುವುದು ಅವರನ್ನು ಯಥಾಸ್ಥಿತಿಯಲ್ಲಿಡುವುದರ ಭಾಗವಾಗಿಯೇ ಜರುಗುತ್ತವೆ. 'ಮಗನ ಕೈಯಿಂದ ಸೋರುವ ರಕ್ತ ಹಾಗೂ ನಿರರ್ಥಕವಾಗಿ ನೆಲದ ಮೇಲೆ ಬಿದ್ದಿರುವ ಹೆಬ್ಬೆರಳನ್ನು ನೋಡಿ ಏಕಲವ್ಯನ ತಾಯಿ "ಮಗನೇ ನಿನ್ನ ಗುರುಗಳು ಸಾವಿನ ರೂಪದಲ್ಲೇಕೆ ಬಂದರು! ಅಯ್ಯೋ ದೈವವೇ! ಏಕಲವ್ಯ, ನೀನು ಉತ್ತಮ ಕುಲದವರನ್ನು ನಂಬಿ ಹಾಳಾದೆ, ಹಾಡುವವನ ಕೊರಳನ್ನು ಹಿಸುಕಿದಂತೆ, ಬಾಣ ಹೂಡುವ ನಿನ್ನ ಬೆರಳನ್ನು ಕತ್ತರಿಸಿದರಲ್ಲ". 'ಶಿಷ್ಯನ ಕೊಲ್ಲುವ ಕೊಲೆಗಾರ ಗುರುವೇನೋ' ಎಂದು ಪ್ರಶ್ನಿಸುತ್ತಾಳೆ. ಈ ಪ್ರಶ್ನೆ 'ಗುರುವಿನ ಸ್ಥಾನ ಶ್ರೇಷ್ಠವಾದದು, ಶಿಷ್ಯನಾದವನು ಗುರುವಿನ ಗುಲಾಮನಾಗಬೇಕು' ಎನ್ನುವ ವೈದಿಕ ಮೌಲ್ಯಗಳನ್ನು ವಿಚಾರಣೆಗೆ ಒಳಪಡಿಸುತ್ತದೆ. 'ಉತ್ತಮ ಜಾತಿಯವರನ್ನು ನಂಬಿ ಹಾಳಾದೆ' ಎನ್ನುವುದು ಡಾ. ಬಾಬಾಸಾಹೇಬ್ ಅಂಬೇಡ್ಕರ್‌ರು ಅವರು ಕೊಟ್ಟ ಎಚ್ಚರಿಕೆಯ ನೆಲೆಯಲ್ಲಿಯೇ ಬಂದಿದ್ದು. ಈ ಎಚ್ಚರ ಇಡೀ ನಾಟಕದುದ್ದಕ್ಕೂ ಕಾಣುತ್ತಲೇ ಇದೆ. ಮುಂದೆ ಏಕಲವ್ಯ ಎಡಗೈಯಿಂದ ಪ್ರಾಕ್ಟೀಸ್ ಮಾಡಿ, ಮೊದಲಿನಂತೆಯೇ ಬಿಲ್ವಿದ್ಯೆ, ಶಬ್ದವೇದಿ ವಿದ್ಯೆಯಲ್ಲಿ ಪಾರಂಗತನಾಗುತ್ತಾನೆ. ಏಕಲವ್ಯ ಎಡಗೈಯಿಂದ ಬಾಣ ಪ್ರಯೋಗಿಸುವ ವಿದ್ಯೆಯನ್ನು ಕರಗತ ಮಾಡಿಕೊಳ್ಳುವುದು ವೈದಿಕರ ಎಡ, ಬಲಗಳ ಶ್ರೇಷ್ಠತೆಯ ವ್ಯಸನವನ್ನು ತಲೆ ಕೆಳಗೆ ಮಾಡುತ್ತದೆ. ದಮನಿತ ವರ್ಗಗಳು ಚಿವುಟಿದಷ್ಟು ಚಿಗುರುವ ಚೈತನ್ಯ ಹೊಂದುವುದನ್ನು ದಾಖಲಿಸುತ್ತದೆ. ಡಾ. ಶಿವಲಿಂಗೇಗೌಡ ಡಿ ಅವರು "ಏಕಲವ್ಯ ನಾಟಕ ಶೋಷಕ ವರ್ಗಗಳ ಎದುರಿಗೆ ಒಂದು ಪರ್ಯಾಯ ಸಂಕಥನ ಒಂದನ್ನು ಕಟ್ಟುತ್ತದೆ. ಇದು ತಳಸಮುದಾಯಗಳ ಆತ್ಮ ಘನತೆಯ ಪರ್ಯಾಯ ಚರಿತ್ರೆಯ ನಿರ್ಮಾಣವೂ ಹೌದು. ನಾಟಕವೇ ಪ್ರಸ್ತಾಪ ಮಾಡುವ

ಹಾಗೆ ಇದು 'ಕಾಡಿಗೆ ಹೋರಾಡಿ ಕಣ್ಣಾದ ವೀರನ ಕಥೆ'. ಏಕಲವ್ಯ ನಾಟಕದ ಪ್ರಧಾನ ಪಾತ್ರ. ವಿಷಯ ಏಕಲವ್ಯನಾದರೂ ಅವನ ಮೂಲಕ ಆರಂಭವಾಗುವ ಸಂಕಥನ ಶೋಷಿತ ಸಮುದಾಯಗಳ ನಿರ್ಲಕ್ಷಿತ ಚರಿತ್ರೆಗೆ ಸಂಬಂಧಿಸಿದ್ದು. ಈ ನಾಟಕ ಕಾಡು, ನಾಡು, ವಿದ್ಯೆ, ನಾಗರಿಕ, ಅನಾಗರಿಕ, ಯುದ್ಧ, ರಕ್ಷಣೆ, ಗುರು, ಶಿಷ್ಯ, ಗುರುದಕ್ಷಿಣೆ ಈ ಪರಿಭಾಷೆಗಳ ಜನಪ್ರಿಯ ವ್ಯಾಖ್ಯಾನಗಳನ್ನು, ಪಾವಿತ್ರ್ಯತೆಯನ್ನು ಪಲ್ಲಟಗೊಳಿಸುತ್ತದೆ. ಬದಲಾಗಿ ತಳಸಮುದಾಯಗಳ ನೆಲೆಯಿಂದ ಹೊಸ ವ್ಯಾಖ್ಯಾನಗಳನ್ನು ಬರೆಯುತ್ತಿದೆ"[4] ಎಂದಿದ್ದಾರೆ. ಕಾಡು, ಅಲ್ಲಿನ ಮನುಷ್ಯ ಸಂಬಂಧ, ಸಮಾಜದ ಪ್ರಯೋಜನಕ್ಕಾಗಿ ವಿದ್ಯೆ, ವಿದ್ಯೆ ಸರ್ವರಿಗೂ ಗುರು ಮುಖೇನ ಲಭ್ಯವಾಗಬೇಕೆಂಬ ನಿಯಮ, ಪರಿಸರ ಮತ್ತು ಜೀವ ಕಾಳಜಿ, ರಕ್ಷಣೆ ಮುಂತಾದವುಗಳೆಲ್ಲವೂ ಪರ್ಯಾಯ ಸಮಾಜವೊಂದರ ಚಿಂತನೆಗಳೇ ಆಗಿವೆ.

ಕುರುಕ್ಷೇತ್ರ ಯುದ್ಧಕ್ಕೆ ಏಕಲವ್ಯನ ಸಹಾಯ ಬಯಸಿ ಪಾಂಡವರು ಮತ್ತು ಕೌರವರು ಬರುವುದು ಶೂದ್ರಶಕ್ತಿಯ ಬಲದ ಅನಿವಾರ್ಯತೆ ಪ್ರಭುತ್ವಕ್ಕೆ ಇದೆ ಎಂಬುದರ ಸೂಚನೆಯೇ ಆಗಿದೆ. ಶೂದ್ರರನ್ನು ಅಧಿಕಾರ, ಆಸ್ತಿಗಳಿಂದ ದೂರ ಇಟ್ಟರೂ ಅವರ ಪ್ರಭುತ್ವದ ಸ್ಥಾಪನೆ, ಮತ್ತು ರಕ್ಷಣೆಗೆ ಶೂದ್ರರು ಬೇಕೇ ಬೇಕು. ಕೃಷ್ಣ, ಯುಧಿಷ್ಠಿರ, ಭೀಮ, ಅರ್ಜುನ, ಕರ್ಣ, ದುರ್ಯೋಧನರು ಬಂದಾಗಿನ ಸಂಭಾಷಣೆಯಂತೂ ಎಚ್ಚೆತ್ತ ದಲಿತ ಹೋರಾಟದ ಕಿಚ್ಚಿನಂತೆ ಕಾಣುತ್ತದೆ. ಕರ್ಣನನ್ನು ಕುರಿತು 'ನಾನು ಯಾರ ಹಂಗಿಗೂ ಒಳಗಾಗಿಲ್ಲ ನಿನ್ನ ಹಾಗೆ. ಎನ್ನುತ್ತಲೇ ನೀನು ಅಧಿಕಾರ ಸಿಕ್ಕ ಮೇಲೆ ನಿನ್ನ ಸಮುದಾಯವನ್ನು ಮರೆತೆ ಎಂದು ಚುಚ್ಚುತ್ತಾನೆ. 'ಸುಯೋಧನ ನಿನ್ನನ್ನು ಒಪ್ಪಿಕೊಂಡಿದ್ದಾನೆ, ಇಡೀ ಸೂತಕುಲವನ್ನಲ್ಲ' ಎಂದು ಎಚ್ಚರಿಸುತ್ತಾನೆ. ಅರ್ಜುನನಿಗೆ ಕೊಡುವ ಉತ್ತರಗಳಂತೂ ಶಾಸ್ತ್ರಗ್ರಂಥಗಳನ್ನು ಕಟಕಟೆಯಲ್ಲಿ ನಿಲ್ಲಿಸುತ್ತವೆ.

'ಹೆಬ್ಬೆರಳು ಹೋದದ್ದು ಮಹಾಪ್ರಮಾದಕ್ಕೆ ಎಡೆ ಕೊಡಲಿಲ್ಲವಲ್ಲ' ಎನ್ನುವ ಅರ್ಜುನನ ಮಾತಿಗೆ ಏಕಲವ್ಯನು "ಆದರೂ ನನಗೆ ನೋವಾಗಿದೆ ಅರ್ಜುನ. ಬಲಗೈ ಹೆಬ್ಬೆರಳು ಕತ್ತರಿಸಿದ ಗಾಯ ಮಾಗಿದ್ದರೂ ಹೃದಯದಲ್ಲಾದ ಗಾಯ ಮಾಯಲು ಯುಗಯುಗಗಳೇ ಬೇಕೆನಿಸುತ್ತದೆ" ಎನ್ನುತ್ತಾನೆ. ಗಾಯವನ್ನು ನೆನಪಿಟ್ಟುಕೊಂಡಾಗಲೇ ಹೊಸದನ್ನು ಸಾಧಿಸಲು ಸಾಧ್ಯ. 'ಗುಲಾಮನಿಗೆ ಗುಲಾಮನೆಂದು ಹೇಳಿದಾಗಲೇ ಆತ ವಿಸ್ಮೃತಿಯಿಂದ ಹೊರಬಂದು ಹೊಸ ಇತಿಹಾಸವನ್ನು ಸೃಷ್ಟಿಸುತ್ತಾನೆ' ಎನ್ನುವ ಡಾಕ್ಟರ್ ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಮಾತು ನೆನಪಾಗುತ್ತದೆ. "ಒಬ್ಬ ಯಃಕಶ್ಚಿತ್ ಬೇಡನನ್ನು ಬೇಡಲು ನಿಮ್ಮ ಶಾಸ್ತ್ರದಲ್ಲಿ ಸಮ್ಮತವಿದೆಯೇ ಗಾಂಡೀವಿ?" ಎಂದು ವ್ಯಂಗ್ಯವಾಡುವ ಮೂಲಕ ಅಂತ ಶಾಸ್ತ್ರಗಳನ್ನು ಏಕಲವ್ಯ ತಿರಸ್ಕರಿಸುತ್ತಾನೆ. "ಎಲ್ಲಾ ಬೇಡರು ಗುರು ಮುಖದಿಂದ ವಿದ್ಯೆ ಕಲಿತು ಶ್ರೇಷ್ಠ ಬಿಲ್ಲುಗಾರರಾಗುವ ವಿಚಾರ ಸಾಮಾನ್ಯ ಸಂಗತಿ ಆಗಬೇಕು" ಎನ್ನುವ ನಾಟಕಕಾರರು ವಿದ್ಯೆ/ಶಿಕ್ಷಣದ ಸಾರ್ವತ್ರಿಕತೆಯನ್ನು ಪ್ರತಿಪಾದಿಸುತ್ತಾರೆ. ಜಾತಿಯನ್ನು ಪ್ರತಿಪಾದಿಸುವ, ಮೇಲು, ಕೀಳೆಂದು ಮನುಷ್ಯರನ್ನು ವಿಭಜಿಸಿದ, ಕುಲದ ಶ್ರೇಷ್ಠತೆಯನ್ನು ಪ್ರತಿಪಾದಿಸುವ ಧರ್ಮ ಗ್ರಂಥಗಳು ನಾಶವಾಗಬೇಕು ಎನ್ನುವುದು ನಾಟಕದ ಆಶಯವಾಗಿದೆ.

ನಾಟಕದ ಕೊನೆಯಲ್ಲಿ ಏಕಲವ್ಯ ತೆಗೆದುಕೊಳ್ಳುವ ನಿರ್ಧಾರ "....ಕುರು ಪಾಂಡವರಲ್ಲಿ ಒಂದು ಪಕ್ಷವಹಿಸಿ ಯಾರೊಬ್ಬರ ದಾಳ ನಾನಾಗಲಾರೆ. ಎಲ್ಲೆಲ್ಲೂ ಇರುವ ಅನ್ಯಾಯದ ವಿರುದ್ಧ, ಜ್ಞಾನದ ಗುತ್ತಿಗೆಯನ್ನು ಎತ್ತಿ ಹಿಡಿಯುವ ಶಾಸ್ತ್ರಗಳ ವಿರುದ್ಧ ನನ್ನ ಯುದ್ಧ. ಮೇಲು ಕೀಳೆಂಬ ವಂಚನೆಯನ್ನು ಅಳಿಸಲು ನನ್ನ ಸಮರ. ಕುರುಕ್ಷೇತ್ರ ಕೇವಲ ಉಳ್ಳವರ ನಡುವಿನ ಕಚ್ಚಾಟ. ಇದು ಇಲ್ಲದವರ ಪರವಾದ ಹೋರಾಟ. ಈ ಸಂಘರ್ಷ ಕುರು ಪಾಂಡವರಿಬ್ಬಬರ ವಿರುದ್ಧ ಸಾಗಬೇಕು. ಆಗ ಮಾತ್ರ ತುಳಿತಕ್ಕೆ ಸಿಕ್ಕವರ ಬಾಳಲ್ಲಿ ಬೆಳಕು ಮೂಡುತ್ತದೆ. ಕಡೆಗಣಿಸಲ್ಪಟ್ಟವರ ಬದುಕಿನ ತೋಟದಲ್ಲಿ ಸಮಾನತೆಯ ಹೂವು ಅರಳುತ್ತದೆ"[5] ಎಂಬುದು ಮೂಲ ಕಥೆಯಲ್ಲಿ ಏಕಲವ್ಯ ಕೌರವರ ಪರ ವಹಿಸಿ ಯುದ್ಧ ಮಾಡುತ್ತಾನೆ. ಈ ನಾಟಕದಲ್ಲಿ ಕುರು ಪಾಂಡವರಿಬ್ಬರೂ ಸಮಾನ ಶೋಷಕ ಶಕ್ತಿಗಳಾಗಿ ನಾಟಕಕಾರರಿಗೆ ಕಂಡಿದ್ದರಿಂದ ಇಬ್ಬರಿಗೂ ನೆರವು ನೀಡುವುದನ್ನು ನಿರಾಕರಿಸುತ್ತಾರೆ. ಇದೊಂದು ದಲಿತರ ಎಚ್ಚರದ ನಡೆಯಾಗಿದೆ. ಸಮಕಾಲೀನ ರಾಜಕಾರಣ ತಳ ಸಮುದಾಯಗಳನ್ನು 'ದಾಳ'ವಾಗಿ ಬಳಸಿಕೊಳ್ಳುತ್ತದೆ. ಇಂದಿನ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಶೂದ್ರ, ದಲಿತ, ಆದಿವಾಸಿ ಮುಂತಾದ ಸಮುದಾಯಗಳನ್ನು ತಮ್ಮ ರಾಜಕೀಯ ದಾಳಗಳನ್ನಾಗಿ ಬಳಸಿಕೊಳ್ಳುತ್ತಾ ಅಧಿಕಾರದಿಂದ ವಂಚಿಸುತ್ತಾ ಬರುತ್ತಿರುವುದನ್ನು ಹಾಗೂ ಅದು ಕೊನೆಯಾಗಬೇಕು 'ಏಕಲವ್ಯ ಪ್ರಜ್ಞೆ' ಪಡೆಯಬೇಕು ಎಂಬುದನ್ನು ನಾಟಕ ಸೂಚಿಸುತ್ತದೆ.

ಈ ನಾಟಕ ಕರ್ಣ ಮತ್ತು ಏಕಲವ್ಯ ಇಬ್ಬರನ್ನೂ ಜೊತೆಗಿಟ್ಟು ನೋಡುತ್ತದೆ. ಇಬ್ಬರೂ ಶೋಷಿತ ಸಮುದಾಯದಿಂದ ಬಂದವರು. ಜಾತಿ ಕಾರಣಕ್ಕಾಗಿ ಅವಮಾನಿತರಾದವರು. ಡಾ. ಅಪ್ಪಗೆರೆ ಸೋಮಶೇಖರ್ ಅವರು ಇವರಿಬ್ಬರಲ್ಲಿಯೇ ವ್ಯತ್ಯಾಸಗಳನ್ನು ಹೀಗೆ ಗುರುತಿಸುತ್ತಾರೆ. "ಕರ್ಣ ಮತ್ತು ಏಕಲವ್ಯ ಇಬ್ಬರೂ ಕೂಡ ಶೋಷಿತ ಸಮುದಾಯದ ಪ್ರತಿನಿಧಿಗಳಾಗಿದ್ದರೂ, ಇವರಿಬ್ಬರಲ್ಲಿ ಸೂಕ್ಷ್ಮ ವ್ಯತ್ಯಾಸವನ್ನು ಕಾಣಬಹುದು. ನಾಟಕದಲ್ಲಿ ಇದು ವ್ಯಕ್ತವಾಗುತ್ತದೆ. ಕರ್ಣ ತನಗಾದ ಶೋಷಣೆಯ ವಾಸ್ತವದ ಅರಿವಿನ ಕೊರತೆಯಿಂದಾಗಿ ಮತ್ತೆ ಶೋಷಕ ವ್ಯವಸ್ಥೆಯ ಮತ್ತೊಂದು ಮಗ್ಗುಲಾದ ದುರ್ಯೋಧನನನ್ನು ಬೆಂಬಲಿಸುತ್ತಾನೆ. ಆದರೆ ಏಕಲವ್ಯನಿಗೆ ಶೋಷಣೆಯ ಸ್ಪಷ್ಟ ಅರಿವಿರುವ ಕಾರಣ ಕೌರವ ಪಾಂಡವರಿಬ್ಬರೂ ಆತನಿಗೆ ಶೋಷಕರಾಗಿಯೇ ಕಾಣುತ್ತಾರೆ. ಕರ್ಣ ವ್ಯವಸ್ಥೆಗೆ ಬಲಿಯಾಗಿ, ಅದರೊಟ್ಟಿಗೆ ರಾಜಿಯಾದರೆ; ಏಕಲವ್ಯ, ವ್ಯವಸ್ಥೆಯನ್ನು ಪ್ರತಿಭಟಿಸಿ ನಿಲ್ಲುತ್ತಾನೆ. ಪ್ರಸ್ತುತ ಶೋಷಿತ ಸಮುದಾಯದ ರಾಜಕಾರಣದ ಸಂಬಂಧದಲ್ಲಿ ಈ ಎರಡೂ ಬಗೆಯ ಮನಸ್ಥಿತಿಗಳನ್ನು ಇದು ಸಂಕೇತಿಸುತ್ತದೆ."[6] ಏಕಲವ್ಯನಿಗೆ ಅಧಿಕಾರಶಾಹಿಯ ಸ್ಪಷ್ಟ ಅರಿವಿದೆ. ತನ್ನ ಅರಿವನ್ನು ಸಮುದಾಯದ ಅರಿವಾಗಿಸುವ ನಾಟಕಕಾರರು ಆಯ್ದುಕೊಂಡ ನಾಟಕದ ವಸ್ತು ಮತ್ತು ಅದನ್ನು ಏಕಲವ್ಯನ ಪಾತ್ರದ ಮೂಲಕ ತಳಸಮುದಾಯ ಕ್ರಾಂತಿಯಾಗಿ ನಿರ್ವಹಿಸಿದ ಬಗೆ ಒಂದು ಹೊಸ ಸೃಜನಶೀಲ ಸಾಹಿತ್ಯ ಕೃತಿಯ ನಿರ್ಮಾಣವಾಗಿದೆ. ಸಾಹಿತಿಯ ಸಾಮಾಜಿಕ ಜವಾಬ್ದಾರಿಯನ್ನು ಎತ್ತಿ ತೋರಿಸಿದೆ. ಪ್ರಾಚೀನ ಸಾಹಿತ್ಯ ಕೃತಿಯ ವಸ್ತುವನ್ನು ವರ್ತಮಾನ ಬದುಕಿಗೆ ರಾಜಕಾರಣಕ್ಕೆ ಮುಖಾಮುಖಿಯಾಗಿಸುವುದು ಸಾಮಾನ್ಯ ಸಂಗತಿಯಲ್ಲ. ಸಮಕಾಲೀನ ಸಂದರ್ಭದ

ರಾಜಕೀಯದಲ್ಲಿ ನಮ್ಮ ಆಯ್ಕೆ ಏನು? ಎಂದು ಯೋಚಿಸುವಂತೆ ಮಾಡಿದ್ದಾರೆ ಸಿದ್ಧಲಿಂಗಯ್ಯನವರು. ಕವಿಯಾಗಿ ಖ್ಯಾತರಾದಷ್ಟೆ, ನಾಟಕಕಾರರಾಗಿಯೂ ಯಶಸ್ವಿಯಾಗಿದ್ದಾರೆ.

**ಪಂಚಮ:**

'ಪಂಚಮ' ಅನ್ನುವ ನಾಟಕದ ಶೀರ್ಷಿಕೆಯೇ ಸ್ವತಂತ್ರ ಭಾರತದಲ್ಲಿ ದಲಿತರ ಸ್ಥಿತಿ ಮೊದಲಿನಂತೆಯೇ ಇರುವುದನ್ನು ಸೂಚಿಸುತ್ತದೆ. ಜೊತೆಗೆ ದಲಿತರ ಜೀವನದಲ್ಲಾದ ಬದಲಾವಣೆ, ಶಿಕ್ಷಣದಿಂದಾಗಿ, ಮಾರ್ಕ್ಸ್, ಅಂಬೇಡ್ಕರ್ ಚಿಂತನೆಗಳಿಂದ ಪಡೆದ ಜಾಗೃತಿ ಈ ನಾಟಕದಲ್ಲಿ ಕಾಣುತ್ತವೆ. ನೌಕರಶಾಹಿ ವ್ಯವಸ್ಥೆ, ಸರ್ಕಾರಿ ಯೋಜನೆಗಳು ಹೇಗೆ ಕೆಲಸ ನಿರ್ವಹಿಸುತ್ತಿವೆ ಎನ್ನುವ ಚಿತ್ರಣ ಇಲ್ಲಿದೆ. ಕಷ್ಟಪಟ್ಟು ಶಿಕ್ಷಣ ಪಡೆದರೂ, ಮೀಸಲಾತಿ ಇದ್ದರೂ ದಲಿತರು ಎದುರಿಸುತ್ತಿರುವ ಆರ್ಥಿಕ ದುಸ್ಥಿತಿ, ಹೊಸ ಬಟ್ಟೆಗಳು ಲಭ್ಯವಾಗದೆ ಅವರಿನ್ನೂ ಪದವೀಧರರಾದರೂ ಹರಕು ಬಟ್ಟೆಯಲ್ಲಿರುವುದು ಇವುಗಳ ಮೂಲಕ ನಾಟಕಕಾರರು ಮೇಲ್ವರ್ಗ ಮತ್ತು ದಲಿತರ ನಡವಳಿಕೆಗಳೆರಡನ್ನೂ ಪ್ರಶ್ನಿಸುತ್ತಾರೆ. ಈ ನಾಟಕದ್ದು ವಿಡಂಬನಾತ್ಮಕ ಶೈಲಿ.

ಮೇಲ್ವರ್ಗ ಮತ್ತು ಮೇಲ್ಜಾತಿಯ ಅಧಿಕಾರಿಗಳೇ ನೌಕರಿಯಲ್ಲಿ ಮೇಲಿನ ಸ್ಥಾನದಲ್ಲಿರುವುದರಿಂದ 'ಹಯವದನರಾವ್' ನಂತಹ ಅಧಿಕಾರಿ ಆರಂಭದಲ್ಲೇ ದಲಿತರ ಕುರಿತಾದ ಅಸಹನೆಯನ್ನು ವ್ಯಕ್ತಪಡಿಸುತ್ತಾರೆ. "ಹರಿಜನ ನಿರುದ್ಯೋಗಿ ಪದವೀಧರರಿಗೆ ತಾತ್ಕಾಲಿಕವಾಗಿ ಉದ್ಯೋಗ ವ್ಯವಸ್ಥೆ ಮಾಡುವ ಕಾರಣದಿಂದ ಸಂದರ್ಶನಕ್ಕೆ ಅಭ್ಯರ್ಥಿಗಳನ್ನು ಆಹ್ವಾನಿಸಲಾಗಿದೆ." 'ಅದೇ ಎಸ್ಸಿಗಳಿಗೆ...' ಅನ್ನುವ ಹಯವದನರಾವ್ ಅವರ ಮಾತಿನಲ್ಲಿ ತುಂಬಿರುವ ಅಸಹನೆ ಇಡೀ ಮೇಲ್ವರ್ಗ ಶಿಕ್ಷಣ ಪಡೆದ ದಲಿತರ ಕುರಿತಾದ ತಿರಸ್ಕಾರವೇ ಆಗಿದೆ. ಅದು ಇಡೀ ನಾಟಕದುದ್ದಕ್ಕೂ ಪ್ರಕಟವಾಗುತ್ತಲೇ ಹೋಗುತ್ತದೆ. ಅಲ್ಲಿ ಸಂದರ್ಶನಕ್ಕೆ ಬಂದ ಪುಟ್ಟಲಕ್ಕಮ್ಮ ಅಧಿಕಾರಿಯ ಕಾಮುಕ ನೋಟಕ್ಕೆ ಒಳಗಾಗುವುದು ಹಾಗೂ ದಲಿತ ಹೆಣ್ಣು ಮಕ್ಕಳ ಬಗ್ಗೆ ಕೀಳು ಮಟ್ಟದ ಪ್ರಶ್ನೆ ಕೇಳುವುದು, ಅದನ್ನು General Knowledge (ಜನರಲ್ ನಾಲೆಡ್ಜ್) ಅನ್ನೋದು, ಕೊನೆಗೆ 'ಅಡುಗೆ ಮಾಡುವ, ಬಟ್ಟೆ ಹೊಲಿಯುವ, ಮಕ್ಕಳ ಪೋಷಣೆ ಬಗ್ಗೆ ವೈಜ್ಞಾನಿಕವಾದ ತಿಳುವಳಿಕೆ ಕೊಡುವ' Training (ಟ್ರೈನಿಂಗ್) ಮತ್ತು ಕೆಲಸ ನೀಡುತ್ತಾರೆ. ಒಬ್ಬ ಪದವಿದರರಿಗೆ ಕೊಡುವ ಈ ಕೆಲಸ 'ಪಕೋಡ ಮಾರಿ' ಎಂದು ನಿರುದ್ಯೋಗಿಗಳಿಗೆ ಪ್ರಧಾನಿಯವರು ನೀಡಿದ ಸಲಹೆಯಂತೆ ಕೇಳಿಸುತ್ತದೆ.

ತನ್ನ ಜಾತಿಯ ಬಗ್ಗೆ ಮೇಲ್ಜಾತಿಗಳು ಹೊಂದಿರುವ ಕೀಳರಿಮೆಯ ಭಾವವನ್ನೇ ಹೊಂದಿರುವ, ಅಕ್ಷರ ಕಲಿತರೂ ಕೀಳರಿಮೆಯಿಂದ ಹೊರಬರದ ಶೇಷಾದ್ರಿ ತನ್ನ ಮೊದಲಿನ ಹೆಸರು ಮತ್ತು ತಂದೆಯ ಹೆಸರನ್ನು ಹೇಳಲು ಸಂಕೋಚ ಪಟ್ಟುಕೊಳ್ಳುತ್ತಾನೆ. ಹರಿಜನೋದ್ಧಾರದಲ್ಲಿ ಅಂದರೆ ಮೇಲ್ಜಾತಿಗಳಲ್ಲಿ ನಂಬಿಕೆ ಇಟ್ಟವನಾಗಿದ್ದಾನೆ. ನವಬ್ರಾಹ್ಮಣನಾಗಿ ಬದಲಾಗುತ್ತಿರುವ ಅಕ್ಷರಸ್ಥ ಸಮುದಾಯವನ್ನು ಪ್ರತಿನಿಧಿಸುತ್ತಿರುವಂತೆ ಶೇಷಾದ್ರಿ ಪಾತ್ರ ರಚನೆ ಇದೆ. ದಲಿತರ ಹೆಸರುಗಳು ಹೆಚ್ಚಾಗಿ

ಜಾತಿ ಸೂಚಕಗಳಾಗಿ ಬಂದಿವೆ. ಅಂತ ಹೆಸರುಗಳಲ್ಲಿ ಸಮುದಾಯದ ಅವಮಾನಗಳಿವೆ. ಅದಕ್ಕಾಗಿ ಅಡ್ಡ ಹೆಸರು ಬದಲಾವಣೆ ಮಾಡುವ ದೇವರಾಯ ಇಂಗಳೆಯವರ ಹೋರಾಟವೂ ಇದೆ ಅನ್ನುವುದನ್ನು ಇಲ್ಲಿ ಗಮನಿಸಬೇಕಾಗುತ್ತದೆ.

ಮೂರನೆಯ ಅಭ್ಯರ್ಥಿಯಾದ ಗಾಂಧಿದಾಸ್ ರಾಜಕೀಯ ದಾಳವಾಗಿ ಪಕ್ಷ ರಾಜಕಾರಣದಲ್ಲಿ ಕೆಲಸ ಮಾಡುತ್ತಿರುವವನು. ಪಕ್ಷಗಳು ಕೊಡುವ ಆಮಿಷಗಳಿಗೆ ಬಲಿಯಾದವನು. ಕನಿಷ್ಠ ಪಕ್ಷ ತಾನು 'Taluk Board Member' (ತಾಲೂಕ್ ಬೋರ್ಡ್ ಮೆಂಬರ್) ಆದರೂ ಆಗಬೇಕು ಅನ್ನುವ ಆಸೆಯನ್ನು ಇಟ್ಟುಕೊಂಡವನು. ಆದರೆ ಇಂಥ ಸಮುದಾಯದ ಕಾಳಜಿ, ಬದ್ಧತೆ ಇಲ್ಲದ ಜನರು ಪವರ್ ಪಾಲಿಟಿಕ್ಸ್ ಪ್ರವೇಶಿಸಿದರೆ ಹೇಗಿರುತ್ತದೆ ಎಂಬುದರ ಸಂಕೇತವಾಗಿ ಗಾಂಧಿದಾಸ್ ಕಾಣುತ್ತಾನೆ. ದಲಿತರು ರಾಜಕೀಯವಾಗಿ ಯಶಸ್ಸು ಸಾಧಿಸಬೇಕಾದರೆ ಬದ್ಧತೆಯುಳ್ಳ ಜನ ಬರಬೇಕಾಗಿದೆ ಎಂದು ವ್ಯಂಗ್ಯದ ಮೂಲಕವೇ ಧ್ವನಿಸುತ್ತಾರೆ. ನಾಲ್ಕನೆಯ ಅಭ್ಯರ್ಥಿಗೆ ಕೊಡುವ ಕೆಲಸವಂತು ಅಸಹನಿಯ ಅನಿಸುತ್ತದೆ. ತನ್ನ ಪರಿಚಯಸ್ಥರ ಮನೆಯ ಪರಿಚಾರಿಕೆ ಕೆಲಸ ಕೊಡುವುದು ಹಾಗೂ ಅವರು ಸಂಬಳದ ಬಗ್ಗೆ ಕೇಳಿದಾಗ "... ಏನೂ ಸಂಬ್ಳಾನಾ? ಅಯ್ಯೋ ನಿಮಗೆ ತಿಳಿದಷ್ಟು ಕೊಡಿ ಸ್ವಾಮಿ....ಇನ್ನೂ ಮಿಕ್ ಪಕ್ಕಿದ್ ತಂಗುಳ್ ಗಿಂಗುಳ್ ಹಾಕಿ...ತಿಡ್ಕಂಡು ಬಿದ್ದಿರ್ತಾನೆ...." (ಶತಮಾನದ ನಾಟಕ: ಪುಟ-420) ಅನ್ನುವ ಮಾತಂತೂ ದಲಿತರ ಕುರಿತಾದ ಮೇಲ್ಜಾತಿ ಅಧಿಕಾರಿಗಳ ತಿರಸ್ಕಾರ, ಅಸಹನೆಗೆ ಬರೆದ ವ್ಯಾಖ್ಯಾನದಂತಿದೆ. ಇದು ದಲಿತರು ಅನುಭವಿಸಿದ ಸುಡು ವಾಸ್ತವದ ಚಿತ್ರಣ.

ನಾಟಕದ ಕೊನೆಯಲ್ಲಿ ಬರುವ 'ಪಂಚಮ' ದಲಿತರ ಕ್ರಾಂತಿಯ ಕಿಡಿಯಾಗಿ ಸಿಡಿಯುತ್ತಾನೆ. 'ಬಿಡಿ ಸಾರ್, ಸಾವಿರಾರು ವರ್ಷನೇ ಕಾದಿದ್ದೇವೆ. ಈ ನಿಮಿಷದ್ದು ಯಾವ ಲೆಕ್ಕ?' ಎಂದು ಅಧಿಕಾರಿಯನ್ನೇ ಬೆಚ್ಚಿ ಬೀಳಿಸುತ್ತಾನೆ. 'ನನ್ನ ಹೆಸರು ಹೊಲೆಮಾದಿಗ' ಎಂದು ಜಾತಿ ಸೂಚಕವಾಗಿಯೇ ಸ್ವಾಭಿಮಾನದಿಂದ ಗುರುತಿಸಿಕೊಳ್ಳುತ್ತಾನೆ. ಅದು ನಾಟಕಕಾರರಾದ ಸಿದ್ಧಲಿಂಗಯ್ಯನವರ 'ಹೊಲೆಮಾದಿಗರ ಹಾಡು' ಶೀರ್ಷಿಕೆಯನ್ನೇ ನೆನಪಿಸುತ್ತದೆ. 'ಹರಿಜನ' ಅಂತ ಕರೆದಾಗ ನಮಗೆ ಅಪ್ಪ ಇದ್ದಾನೆ ಅಂತ ತಿರಸ್ಕರಿಸುತ್ತಾನೆ. ಗಾಂಧೀಜಿಯವರಿಗೆ ಡಾ. ಅಂಬೇಡ್ಕರರು ಕೊಟ್ಟ ಉತ್ತರದಂತೆ ಕೇಳಿಸುತ್ತದೆ. "ನಿಮ್ಮ ಕರುಣೆ, ಸಹಾನುಭೂತಿ ನಮಗೆ ಬೇಡ; ನನಗೆ ಸಮಾಜದ ಸಂಪೂರ್ಣ ಬದಲಾವಣೆ ಬೇಕು" ಎನ್ನುತ್ತಾನೆ. "ನಿಮ್ಮ ಭಿಕ್ಷೆ ರಾಜ್ಯ ಹೋಗಬೇಕು, ಸಮತ ರಾಜ್ಯ ಬರಬೇಕು ಅನ್ನೋದೇ ನಮ್ಮ ಗುರಿ. ಆದರೆ ನಿಮ್ಮಂತವರು ನಮ್ಮ ಜನರಿಗೆ ಸುಳ್ಳು" ಭರವಸೆ ಕೊಟ್ಟು ಭ್ರಮೆಯಲಿ ಮುಳುಗಿಸಿದ್ದೀರಿ. ನಿಮ್ಮ ಸುಳ್ಳು ನಿಲ್ಲಬೇಕಾದರೆ ನಿಮ್ಮ ಉಸಿರಾಟ ನಿಲ್ಲಬೇಕು. ನಿಮ್ಮ ಕಬ್ಬಿಣದ ಬೇಲಿಯಿಂದ ತಪ್ಪಿಸಿಕೊಂಡು ಹೊರಗೆ ಬರೋವರ್ಗೂ ನಮಗೆ ಸಮಾಧಾನ ಇಲ್ಲ. ನಮಗೆ ಭಿಕ್ಷೆ ಬೇಡ ಆರ್ಥಿಕ ಸಮಾನತೆ ಬೇಕು. ಸಾಮಾಜಿಕ ಸಮಾನತೆ ಬೇಕು. ಎಲ್ಲೆಲ್ಲೂ ಎಲ್ಲದರಲ್ಲೂ ಬದಲಾವಣೆ ಬೇಕು"[7] ಎಂದು ಅಧಿಕಾರಿಯ ವಿರುದ್ಧ ಹೋರಾಟಕ್ಕಿಳಿಯುತ್ತಾನೆ. ಅಧಿಕಾರಿ ನೀನು ಕಮ್ಯುನಿಸ್ಟ್ ಇರಬೇಕು ಎನ್ನುತ್ತಾನೆ. ಮಾರ್ಕ್ಸ್ ಮತ್ತು ಅಂಬೇಡ್ಕರ್ ಇವರಿಬ್ಬರನ್ನು ಒಟ್ಟಿಗೆ ಇಟ್ಟುಕೊಂಡು ಹೋರಾಟ

ರೂಪಿಸಿ ಹೋರಾಡಿದ ಸಿದ್ಧಲಿಂಗಯ್ಯನವರೇ ಈ ನಾಟಕದಲ್ಲಿ 'ಪಂಚಮ'ನಂತೆ ಕಾಣುತ್ತಾರೆ. ದಲಿತರ ಸಿಟ್ಟಿಗೆ ಸಾತ್ವಿಕ ಕಾರಣಗಳಿವೆ.

ಒಟ್ಟಿನಲ್ಲಿ ಕೊನೆಗಾಣದ ಬಾಳಿನ ಗೂಡಿಗೆ ಹೋರಾಟವೇ ದಾರಿ ಎಂದು ನಾಟಕ ಹೋರಾಟದಲ್ಲಿ ಮುಕ್ತಾಯವಾಗುತ್ತದೆ. ಸರ್ಕಾರ, ಸರ್ಕಾರಿ ಯೋಜನೆಗಳು ಹಾಗೂ ಮೇಲ್ವರ್ಗದ ಅಧಿಕಾರಿ ವರ್ಗದ ಮುಖವಾಡಗಳನ್ನು ನಾಟಕ ಬಯಲುಗೊಳಿಸುತ್ತದೆ. ದಲಿತ ವರ್ಗದ ಆತ್ಮವಿಮರ್ಶೆಯನ್ನು ಮಾಡುವ ನಾಟಕಕಾರರು ಪಂಚಮನ ಮೂಲಕ ಮೇಲ್ವರ್ಗದವರ ಕರುಣೆ, ಅನುಕಂಪ ಕೃಪೆಗಳಿಂದ ಹೊರಬಂದು ಸ್ವಾಭಿಮಾನದ ಹೋರಾಟವನ್ನು ಮಾಡಬೇಕಾದ ಅನಿವಾರ್ಯತೆಯನ್ನು ಹೇಳುತ್ತದೆ. 'ಪಂಚಮ' ದಲಿತ ವರ್ಗದ ಎಚ್ಚೆತ್ತ ಹೋರಾಟಗಾರನಾಗಿ ಕಂಡಿದ್ದಾನೆ.

**ನೆಲಸಮ:**

ನಗರದ ಸೌಂದರ್ಯೀಕರಣಕ್ಕಾಗಿ ಕೊಳಗೇರಿ ಜನರನ್ನು ಒಕ್ಕಲೆಬ್ಬಿಸುವ ಅನ್ಯರ ಗುಡಿಸಲುಗಳನ್ನು ನೆಲಸಮ ಮಾಡುವ ಸರ್ಕಾರದ ಕಾರ್ಯಯೋಜನೆಯನ್ನು ಕುರಿತಾದುದು ಈ ನಾಟಕ. ರಾಣಿ ಚಂದ್ರಮ್ಮನ ಮಗ ವಿಜಯನಿಗೆ ಅರಮನೆಯಿಂದ ಹೊರಗೆ ಬಂದಾಗ ವಾಸನೆ ಬರುತ್ತದೆ. ಅದು ಪಕ್ಕದ ಕೊಳಗೇರಿಯಿಂದ ಬಂದ ವಾಸನೆ ಎಂದು ತಿಳಿದು ಕೊಳಗೇರಿಯನ್ನು ನೆಲಸಮ ಮಾಡುವ ಕಥನ ನಾಟಕದ ವಸ್ತು. ಭಾರತದ ಸೌಂದರ್ಯ ಉಳಿಯಬೇಕಾದರೆ ಕೊಳಗೇರಿಗಳು ನಾಶವಾಗಬೇಕು. ಶ್ರೀಮಂತರು ಉಸಿರಾಡಲು ಆರೋಗ್ಯದಿಂದಿರಲು ಒಳ್ಳೆಯ ಗಾಳಿ ಬೆಳಕಿನ ಪರಿಸರ ಬೇಕು. ಒಂದು ನಿರ್ದಿಷ್ಟ ಸಮಕಾಲೀನ ಘಟನೆಯನ್ನಾಧರಿಸಿ ಈ ನಾಟಕ ಬರೆಯಲಾಗಿದೆ.

ದಲಿತ ಚಳುವಳಿಯ ಬಂಡಾಯ ಚಳುವಳಿಯ ಹಾಡಾದ ಶಾರಿ ಗಂಜಿಗಾಗಿ ಬೆವರನ್ನು ಸುರಿಸುತ್ತ/ ಊರೂರು ತಿರುಗುತ್ತ ಬಂದೆವಲ್ಲ/.... ಈ ನಾಡು ಕಟ್ಟಿದವರು ನಾವು ಈ ನಾಡಪ್ರಜೆಗಳು/ ಕೂಲಿಯವರು ನಾವು ಕೇಳರಣ್ಣ/ ಗುಲಾಬಿ ನಗರದ ಗುಡಿಸಲು ಬ್ಯಾಡೆಂದು ಬೆಂಗಳೂರು ನಮ್ಮನ್ನು ದಬ್ಬಿತಲ್ಲ/" ಅನ್ನುವ ಹೋರಾಟದ ಹಾಡನ್ನು ಈ ನಾಟಕ ನೆನಪಿಸುತ್ತದೆ. ದಲಿತರ, ನಿರ್ಗತಿಕರ ನೋವನ್ನು ಪರಿಣಾಮಕಾರಿಯಾಗಿ ಹೃದಯಕ್ಕೆ ನಾಟುವಂತೆ ಕಟ್ಟಿಕೊಡುತ್ತದೆ. ತಾವು ಕಟ್ಟಿದ ನಾಡಲ್ಲೇ ನಿರ್ಗತಿಕರಾಗುವ ದುಡಿದ ದಲಿತ ವರ್ಗದ ದುರಂತದ ಚಿತ್ರವನ್ನು ಅದರ ಆಳವನ್ನು ಬಹಳ ಪರಿಣಾಮಕಾರಿಯಾಗಿ ಕಟ್ಟಿಕೊಟ್ಟಿದೆ.

ಡಾ. ಸಿದ್ಧಲಿಂಗಯ್ಯನವರ ಮೂರು ನಾಟಕಗಳು ರಂಗಪ್ರಯೋಗದಲ್ಲೂ ಯಶಸ್ವಿಯಾಗಿವೆ. ಶೋಷಣೆಯ ಮೂಲಗಳನ್ನು ಶೋಧಿಸುತ್ತಾ ದಲಿತರು ಮುಂದೇನು ಮಾಡಬೇಕೆಂಬುದರ ದಾರಿಗಳನ್ನು ತೆರೆದಿಡುತ್ತದೆ. ನಾಟಕದ ಸಂಭಾಷಣೆ, ಪದಕಟ್ಟುವಿಕೆ ಸಿದ್ಧಲಿಂಗಯ್ಯನವರ ವೈಶಿಷ್ಟ್ಯತೆಯನ್ನು ಹೇಳುತ್ತದೆ. ಜನ ಬದುಕಿನ ಕೇಡುಗಳನ್ನು, ಕೇಡಿನ ಕಾರಣಗಳನ್ನು ಶೋಧಿಸುತ್ತಾ ಹೋರಾಟದ ಆಯ್ಕೆಯನ್ನೇ ಎಲ್ಲಾ ನಾಟಕಗಳು ಪ್ರತಿಪಾದಿಸುತ್ತವೆ. ಸ್ವಾತಂತ್ರ್ಯಪೂರ್ವ ಮತ್ತು ಸ್ವಾತಂತ್ರ್ಯೋತ್ತರ

ಭಾರತದ ಕಥನವನ್ನು ಹೇಳುತ್ತಿದ್ದರೂ ದಲಿತರ ಬದುಕಿನಲ್ಲಿ ಅಂತ ಬದಲಾವಣೆ ಏನು ಸಂಭವಿಸಿಲ್ಲ. ಧಾರ್ಮಿಕ ಸಂಹಿತೆಗಳೇ ಅಂದು ಪ್ರತ್ಯಕ್ಷವಾಗಿ ಕೆಲಸ ಮಾಡಿದರೆ, ಇಂದು ಪರೋಕ್ಷವಾಗಿ ಕೆಲಸ ಮಾಡುತ್ತಿವೆ. ಇವುಗಳ ವಿರುದ್ಧ ನಿರಂತರವಾಗಿ ಹೋರಾಡಬೇಕಾದ ಆಯ್ಕೆ ದಲಿತ, ಶೋಷಿತ ಸಮುದಾಯಗಳ ಮುಂದಿದೆ. ಹಾಸ್ಯ, ವ್ಯಂಗ್ಯ, ವಿಡಂಬನೆಯಂತ ಶೈಲಿಯಲ್ಲಿ ಶೋಷಣಾ ಪರಂಪರೆಯನ್ನು ಲೇವಡಿ ಮಾಡುತ್ತಾ ದಲಿತರ ಸ್ವಾಭಿಮಾನವನ್ನು ಈ ನಾಟಕಗಳು ಬಡಿದೆಬ್ಬಿಸುತ್ತವೆ. ಸಮಸಮಾಜದ ನಿರ್ಮಾಣದ ದಾರಿಗಳನ್ನು ತೆರೆದು ತೋರಿಸುತ್ತವೆ. ಕವಿಯಾಗಿ ಯಶಸ್ವಿಯಾದಷ್ಟೇ ನಾಟಕಕಾರರಾಗಿಯೂ ಸಿದ್ಧಲಿಂಗಯ್ಯನವರು ಪ್ರಸಿದ್ಧರಾಗಿದ್ದಾರೆ.

**ಕೊನೆ ಟಿಪ್ಪಣಿಗಳು:**

1. ದಂಡಪ್ಪ ಎಚ್. (ಸಂ.), (2001), ಬಡವರ ನಗುವಿನ ಶಕ್ತಿ, ಬೆಂಗಳೂರು: ಅಂಕಿತ ಪುಸ್ತಕ, ಪು.ಸಂ. 226
2. ಡಾ. ಸಿದ್ಧಲಿಂಗಯ್ಯ, (2025), ಏಕಲವ್ಯ, ಬೆಂಗಳೂರು: ಅಂಕಿತ ಪುಸ್ತಕ, ಪು.ಸಂ. 35
3. ಅದೇ, ಪು.ಸಂ. 28–29
4. ಉಮಾಶಂಕರ ಎಚ್.ಡಿ. (ಸಂ.), ಸುಡುವ ನೆತ್ತಿಯ ಸಿಂಬೆ, ಪು.ಸಂ. 116
5. ಡಾ. ಸಿದ್ಧಲಿಂಗಯ್ಯ, (2025), ಏಕಲವ್ಯ, ಬೆಂಗಳೂರು: ಅಂಕಿತ ಪುಸ್ತಕ, ಪು.ಸಂ. 56
6. ಅರವಿಂದ ಮಾಲಗತ್ತಿ (ಪ್ರ.ಸಂ.), (2015), ಸೀಮಾತೀತ ಕನ್ನಡ ಸಾಹಿತ್ಯ ಚರಿತ್ರೆ: ಸಂಪುಟ–6: ಕಾದಂಬರಿ–ನಾಟಕ–ಸಂಶೋಧನೆ, ಮೈಸೂರು: ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಪು.ಸಂ. 493
7. ಮರುಳಸಿದ್ದಪ್ಪ ಕೆ. (ಸಂ.), (2001), ಶತಮಾನದ ನಾಟಕ, ಬೆಂಗಳೂರು: ಕರ್ನಾಟಕ ಸಾಹಿತ್ಯ ಅಕಾಡೆಮಿ, ಪು.ಸಂ. 823